ಸಚಿವರೂ ಹಾಸನ ಜಿಲ್ಲೆಯವರೆ. ಮುಖ್ಯಮಂತ್ರಿಯವರೂ ಹಾಸನ ಜಿಲ್ಲೆಯವರೆ. ಅರಸೀಕೆರೆ ತಾಲ್ಲೂಕಿನ ಗರುಡನಗಿರಿಗೆ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆಂದು ವದಂತಿ ಇತ್ತು. ಗರುಡನಗಿರಿ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದರು. ಬೇರೆ ಬೇರೆ ಕಡೆಗೆ ಹೋಗುವುದಕ್ಕಿಂತ ನಮ್ಮ ಗರುಡನಗಿರಿಗೆ ಬರಬೇಕು. ಅದೊಂದೊ ಪ್ರವಾಸಿ ಕೇಂದ್ರವಾಗಿದೆ. Border ನಲ್ಲಿದೆ. ದಯವಮಾಡಿ ಮಾನ್ಯ ಮುಖ್ಯಮಂತ್ರಿಯವರು ಅರಸೀಕೆರೆಯ ಗರುಡನಗಿರಿಗೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸ್ನೇಹಿತರೇನು ನಿಲುವಳಿ ಸೂಚನೆ ತಂದಿದ್ದಾರೆ ಅದನ್ನು ತಳ್ಳಿಹಾಕಿದ್ದೇನೆ. ಇದರ ಬಗ್ಗೆ ನಿಯಮ 69ರ ಕೆಳಗೆ ನಾಳೆ ಎರಡು ಗಂಟೆಗಳ ಕಾಲ ಚರ್ಚೆ ಮಾಡಲು ದಿನಾಂಕವನ್ನು fix ಮಾಡುತ್ತೇನೆ. ಈಗ ವಿಧೇಯಕಗಳು ಇಲ್ಲಿ pass ಆಗಿ ಮೇಲ್ಮನೆಗೆ ಹೋಗಬೇಕಾಗಿದೆ. ಆದ್ದರಿಂದ ವಿಧೇಯಕಗಳನ್ನು pass ಮಾಡಲು ಎಲ್ಲರೂ ಸಹಕರಿಸಬೇಕು. ಈಗ ಶಾಸನ ರಚನೆ. ವಿಧೇಯಕವನ್ನು ಮಂಡಿಸುವುದು.

4. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u> :

ಅ) ವಿಷಯ : ಶಿಕ್ಷಕರ ನೇಮಕಾತಿ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಕೇಳಿದ್ದೆ. 2005–06ನೇ ಸಾಲಿನಲ್ಲಿ ಸರ್ಕಾರದವರು ಒಂದು Advertisement 4–5–2005 ರಂದು ಇದ್ದು ಅದರಲ್ಲಿ ಗರಿಷ್ಠ age ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 45 ವರ್ಷ, ಹಿಂದುಳಿದ ವರ್ಗದವರಿಗೆ 43 ವರ್ಷ, ಇತರೆಯವರಿಗೆ 40 ವರ್ಷ ಎಂದು ಇವರನ್ನು ಆಯ್ಕೆ ಮಾಡಿಬಿಟ್ಟರು. ಆ ರೀತಿ ಆಯ್ಕೆ ಮಾಡಿ appointment ಕೊಡಬೇಕಾದರೆ ಯಾರೋ ಇದು 1977 ರಲ್ಲೇನು ನೀವು C & R ನ್ನು amend ಮಾಡಿದಿರಿ ಅದರ ವಿರುದ್ಧವಾಗಿದೆಯೆಂದು Tribunal ಮುಂದೆ ಕೇಸನ್ನು ಹಾಕಿದ್ದಕ್ಕೆ ಆ ಶಿಕ್ಷಕರ appointment ನ್ನು held up ಮಾಡಿಬಿಟ್ಟರು. 2002ರಿಂದ ಇಲ್ಲಿಯವರೆಗೆ ಅಲ್ಲಿ ಆಯ್ಕೆಯಾಗಿದ್ದ ಶಿಕ್ಷಕರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದಾರೆ. ನೀವೇ advertisement ಮಾಡಿ ನೀವೇ ಅವರಿಗೆ ಇಂಥ ವಯೋಮಿತಿಯವರು application ಹಾಕಿ ಎಂದು ಹೇಳಿ appointment order ನ್ನು issue ಮಾಡತಕ್ಕ ಕಾಲದಲ್ಲಿ ನೀವೇ ತಡೆದಿರುವುದು ತಪ್ಪಲ್ಲವೆ? ಸರ್ಕಾರದ ಕಾರ್ಯದರ್ಶಿಗಳು

16–8–2003 ರಂದು ಒಂದು ಕಾಗದವನ್ನು ಬರೆದರು. ಅದರಲ್ಲಿ ಪ್ರಸ್ತುತ ನಡೆಯುತ್ತಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಹಲವಾರು ಶಾಸಕರು 2003ರ ಸರ್ಕಾರಿ ಅಧಿಸೂಚನೆಯಂತೆ ನೇಮಕಾತಿ ಪ್ರಕ್ರಿಯೆ ಮಾಡಲು ಪ್ರೌಢಶಾಲೆ ಶಿಕ್ಷಕರಿಗಿದ್ದ ಗರಿಷ್ಠ ವಯೋಮಿತಿಯನ್ನು ಮುಂದುವರೆಸಬೇಕೆಂದು ಸಲಹೆ ಮಾಡಿರುತ್ತಾರೆ. ಈ ರೀತಿಯಾಗಿ ಹೇಳಿ 1967ರ ಆದೇಶದಂತೆ ಈ recruitment ನ್ನು final ಮಾಡಿ ಎಂದು Government decision ತೆಗೆದುಕೊಂಡು ಸರ್ಕಾರದ ಕಾರ್ಯದರ್ಶಿಗಳೇ ಬರೆದರು. ಆ ರೀತಿ ಬರೆದರೂ ಇವತ್ತಿನವರೆಗೆ ಅವರುಗಳ appointment ಆಗಿಲ್ಲ. ಇದರಿಂದ ಬಹಳ ಜನರೇನು ಆಚೆ ಉಳಿಯುತ್ತಿರಲಿಲ್ಲ. ಈ ಆರ್ಡರ್‌ನ್ನು ಜಾರಿಗೆ ತಂದರೆ ನಾಲ್ಕೂ ಡಿವಿಜನ್ ಸೇರಿ ಸುಮಾರು 41 ಜನರಿಗೆ ನೇಮಕಾತಿಯಾಗುತ್ತದೆ. ಗುಲ್ಬರ್ಗಾ 18, ಬೆಳಗಾಂ 11, ಬೆಂಗಳೂರು 7, ಮೈಸೂರು 5. 2104 post ನಲ್ಲಿ 41 post ಈ ವ್ಯತ್ಯಾಸ ಬರುತ್ತದೆ. 1967ನೇ ಇಸವಿಯಲ್ಲಿ ಏನು C & R Rulesಗೆ amendment ತಂದಿದ್ದೀರಿ ಆ ವ್ಯತ್ಯಾಸದಲ್ಲಿ ಈ 41 ಜನರು ಉಳಿದುಕೊಳ್ಳುತ್ತಿದ್ದರು. ಸರ್ಕಾರ ತಮ್ಮ ತಪ್ಪನ್ನು ಒಪ್ಪಿಕೊಂಡುಬಿಟ್ಟಿದೆ. 2003ರ ಶಾಸನಸಭೆಯಲ್ಲಿ ಚರ್ಚೆಯಾಗಿದೆ. ಮಂತ್ರಿಗಳು ಇದು Assembly ಯಲ್ಲಿ discussion ಆಗಿರುವುದರಿಂದ 1967ನೇ ಇಸವಿಯ ಆದೇಶದಂತೆ ಇವರಿಗೆ appointment order ಕೊಡಿ ಎಂದು ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಟ್ರಿಬ್ಯುನಲ್ ಮುಂದೆ ಲಾಯರ್ ಇದು ಯಾವುದನ್ನು ಹೇಳದೇ, simple ಆಗಿ Government ಇದನ್ನು accept ಮಾಡಿಕೊಳ್ಳುತ್ತದೆಂದು ಹೇಳಿಕೆ ಕೊಟ್ಟಿದ್ದಕ್ಕೆ ಈ 41 ಜನರಿಗೆ ಇವತ್ತಿನವರೆಗೆ appointment order ಸಿಕ್ಕಿಲ್ಲ. ನಾವು ಬಹಳ ದಿವಸಗಳಿಂದ ಇದನ್ನು ಏನಾದರೂ ಮಾಡಿ ಇತ್ಯರ್ಥ ಮಾಡಿ, ಅವರೆಲ್ಲಾ age ಆಗಿರುವವರು, ಮನೆಯಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲವೆಂದು Educational Minister ರವರ ಗಮನವನ್ನು ಸೆಳೆಯುತ್ತಲ್ಲೇ ಇದ್ದೇವೆ. ನಿಮ್ಮ advertisement ತಪ್ಪಾಗಿರುವುದಕ್ಕೆ ಅವರು ಹೊಣೆಯಲ್ಲ. ನಿಮ್ಮ advertisement ತಪ್ಪಾಗಿದ್ದರಿಂದ ಆವತ್ತು ಅವರು select ಆಗಿ ಬಿಟ್ಟರು. Select ಆದಮೇಲೆ ಈ ಕಾರಣವನ್ನು ಕೊಟ್ಟು ಅವರನ್ನೇನು ಆಯ್ಕೆ ಮಾಡಲಿಲ್ಲ ಅದನ್ನು ತಾವು ಬದಲಾಯಿಸಬೇಕಾಗುತ್ತದೆ. ಕನಿಷ್ಟ 40 postನ್ನು excess ಆಗಿ recruitment ಮಾಡಿಕೊಂಡಾದರೂ ಇವರಿಗೆ ಕೆಲಸ ಕೊಡಬೇಕಾಗುತ್ತದೆ. ಇವರಿಗೆ ಈಗಂತೂ ಬೇರೆ ಮಾರ್ಗವೇ ಇಲ್ಲ. 2003–2007 ರವರೆಗೆ ಆಯ್ಕೆಯಾಗಿದ್ದ

ಅವರಿಗೆ ಯಾವುದೇ endorsement ಇಲ್ಲ. ನೀವು ಆಯ್ಕೆಯಾಗಿದ್ದೀರಿ ಎಂದಾಗಲೀ ಇಲ್ಲವೆಂದಾಗಲೀ ಎಂಬುದು ಇಲ್ಲ. ಸುಮ್ಮನಾಗಿಬಿಟ್ಟಿದ್ದಾರೆ. ಆದ್ದರಿಂದ ಅದರ ಬಗ್ಗೆ ಒಂದು ಹೇಳಿಕೆಯನ್ನು ನೀವು ಕೊಡಬೇಕು. ನೀವು ಮಾಡಿರುವ mistake ಗೆ candidate ಏಕೆ suffer ಮಾಡಬೇಕು? Advertisement ಮಾಡಬೇಕಾದರೆ ನೀವು ನೋಡಿಕೊಳ್ಳಬೇಕಾಗಿತ್ತು. ನೀವು 1977ರಲ್ಲಿ C & R ಅಥವಾ K.C.S.R ನ್ನು amendment ಮಾಡಿಕೊಂಡವರು ಆ ಆದೇಶದ ಕೆಳಗೆ advertisement notification ಹಾಕಬೇಕಾಗಿತ್ತು. 1967ರ ಕೆಳಗೆ ಇದ್ದ order ಮೇಲೆ ನೀವು notification issue ಮಾಡಿ ಯಾರನ್ನೋ ತೃಪ್ತಿಪಡಿಸಲು ಆಯ್ಕೆಯಾದವರನ್ನು ಹೊರಗಡೆ ಇಟ್ಟರೆ ತಪ್ಪಾಗುತ್ತದೆ. ಇದಲ್ಲದೇ ಈ ಶಾಸನ ಸಭೆಯಲ್ಲಿ ಈಗಾಗಲೇ ತೀರ್ಮಾನವಾಗಿದೆ. ಅದನ್ನು ನೀವೇ ಬರೆದಿದ್ದೀರಿ. ಆ ಬಗ್ಗೆ Assembly ಯಲ್ಲಿ ಚರ್ಚೆಯಾಗಿದೆ. ಅದರಂತೆ, ಇದೊಂದು ಆಯ್ಕೆಯನ್ನು ಈ ರೀತಿ close ಮಾಡಿ ಎಂದು ನಿಮ್ಮ ಸೆಕ್ರೆಟರಿಯವರೇ ಬರೆದಿದ್ದಾರೆ. ತಾವು ಈಗ ಅವರಿಗೆ ಏನಾದರೂ ಮಾಡಿ, ಅವರನ್ನು ನೌಕರಿಗೆ ತೆಗೆದುಕೊಳ್ಳುವುದಕ್ಕೆ ಪ್ರಕ್ರಿಯೆ ಚಾಲೂ ಮಾಡಿ, ಅವರಿಗೆ appointment ಅನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, 1967ರ ನಿಯಮಾವಳಿ ಪ್ರಕಾರ ಪತ್ರಿಕೆಯಲ್ಲಿ ಅವರು advertisement ಕೊಟ್ಟು, ಅವರನ್ನು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸ್ ಮಾಡಿ, ಅವರು select ಆಗಿದ್ದರೆ, ತಾವು ಹೇಳಿದಂತೆ ಅದು ಅಭ್ಯರ್ಥಿಗಳ ತಪ್ಪಲ್ಲ. ಇಲಾಖೆಯವರು ತಪ್ಪು ಮಾಡಿದ್ದರೆ ಇಲಾಖೆಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ರೀತಿಯಿಂದ ಇವರನ್ನು absorb ಮಾಡಬೇಕು ಎನ್ನುವುದನ್ನು ನೋಡಬೇಕಾಗುತ್ತದೆ. ತಪ್ಪು ನಮ್ಮವರು ಮಾಡಿದ್ದರೆ, advertisement ಪ್ರಕಾರ ಅರ್ಜಿ ಹಾಕಿರುತ್ತಾರೆ, selection ಆಗಿರುತ್ತಾರೆ, selection ಆದ ನಂತರ ಅವರಿಗೆ ಯಾವಾಗಲೋ ಅವರು ತಿಳಿಸಬೇಕಾಗಿತ್ತು. ನಮ್ಮಲ್ಲಿ mistake ಆಗಿದ್ದರೆ, ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ. ಈ 41 ಮಂದಿಯನ್ನು ಯಾವ ರೀತಿಯಿಂದ absorb ಮಾಡಬೇಕು ಎನ್ನುವುದನ್ನು ನಾನು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಿಮ್ಮ ಇಲಾಖೆ ಹೊರಡಿಸಿದ್ದ ನೇಮಕಾತಿ ಅಧಿಸೂಚನೆ ಕಾಪಿಯನ್ನು ನಾನು ನಿಮಗೆ ನೀಡಿರುವ ಮಾಹಿತಿ ಪತ್ರದೊಂದಿಗೆ ಲಗತ್ತಿಸಿದ್ದೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ :– ಮಾನ್ಯ ಅಧ್ಯಕ್ಷರೆ, 1967ರ ನಿಯಮಾವಳಿ ಪ್ರಕಾರ advertisement ಮಾಡಿದ್ದಾರೆ. ಮುಂದೆ ಅವರು ಅದನ್ನು 77ಕ್ಕೆ convert ಮಾಡಿದ್ದಾರೆ. ಅದು ಸರಿಯಾದುದಲ್ಲ. ಏನೇ ಇರಲಿ, ತಪ್ಪು ಇರಲಿ, ಸರಿ ಇರಲಿ, ಯಾವುದೇ ಒಂದು selection ಆಗಬೇಕಾದರೆ ಪತ್ರಿಕೆಯಲ್ಲಿ advertisement ಏನು ಕೊಡುತ್ತಾರೋ, ಅದು final. ಅದರ ಪ್ರಕಾರ selection ಆಗುತ್ತದೆ. ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇನೆ. ನಾನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಈ 41 ಮಂದಿಗೆ ಏನು ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ, ಅವರಿಗೆ ಯಾವುದೇ ರೀತಿಯಿಂದ ಅನ್ಯಾಯವಾಗದಂತೆ ನೋಡಿಕೊಳ್ಳುವಂತಹ ಕೆಲಸ ಮಾಡುತ್ತೇನೆ.

ಅಧ್ಯಕ್ಷರು :– ಮಾನ್ಯ ಬೇಳೂರು ಗೋಪಾಲಕೃಷ್ಣರವರೆ, ಈಗ ತಮ್ಮ ವಿಚಾರ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ವಿಚಾರವೊಂದನ್ನು ಪ್ರಸ್ತಾಪ ಮಾಡಬೇಕೆಂದು ಕಳೆದ ಒಂದು ವಾರದಿಂದ ನಾವು ಕೇಳುತ್ತಿದ್ದೇವೆ. ನಮಗೂ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :– ಶೂನ್ಯ ವೇಳೆಯಲ್ಲಿ ಒಂದೋ, ಎರಡೋ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕೊಡಬಹುದು, ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಲು ಸಾಧ್ಯವಾಗುವುದಿಲ್ಲ.

(ಗೊಂದಲ)

ಮಾನ್ಯ ಬೇಳೂರು ಗೋಪಾಲಕೃಷ್ಣರವರೆ, ತಮ್ಮ ವಿಚಾರ ಈಗ ಪ್ರಸ್ತಾಪ ಮಾಡಿ.